

# ಪುಟ್ಟಕ್ಕ ಟ್ಯೂಷನ್ನಿಗೆ ಹೊರಟಿದ್ದು ಏಕೆ?

**ಬೆಳಿಗ್ಗೆ ಬೆಳಿಗ್ಗೆ ಆನ್‌ಲೈನ್‌ನಲ್ಲಿ ಟೀಚರ್ ಹೇಳುವ ಪಾಠ ಎಂದರೆ, ಯಾರೋ ನಿಲ್ಲಿಸಲು ಮರೆತ ನಲ್ಲಿಯಂತೆ ಮಕ್ಕಳ ಪಾಲಿಗೆ ಕಿರಿಕಿರಿ.**

■ ಸ್ವಯಂಪ್ರಭಾ

ಮಾರ್ಚ್‌ನಲ್ಲಿ ಲಾಕ್‌ಡೌನ್ ಘೋಷಣೆಯಾದಾಗ, ಪುಟ್ಟಕ್ಕನಿಗೆ ಭಾರೀ ಖುಷಿಯಾಗಿತ್ತು. ಶಾಲೆ ಇಲ್ಲ, ಪರೀಕ್ಷೆ ಇಲ್ಲ. ಮನೆಯಲ್ಲಿಯೇ ಅಪ್ಪ ಅಮ್ಮನ ಜೊತೆಗೆ ಗಮ್ಮತ್ತು. ಎಂಟನೇ ತರಗತಿಯ ಹುಡುಗಿ ಪುಟ್ಟಕ್ಕನಿಗೆ ಹಾಜರಾತಿ ಪುಸ್ತಕದಲ್ಲಿ ಕೌಸಲ್ಯಾ ಎಂಬ ಚಂದದ ಹೆಸರು. ಲಾಕ್‌ಡೌನ್ ಆದ ಕೂಡಲೇ, ಯುಟ್ಯೂಬ್‌ನಲ್ಲಿ ಅಡುಗೆ ರೆಸಿಪಿ ಹುಡುಕಿ ಮಾಡಲು ಶುರು ಮಾಡಿದಳು.

ಕೆಲಸಮಯದ ನಂತರ ಶಾಲೆಯಿಂದ ಆನ್‌ಲೈನ್ ತರಗತಿಗಳು ಶುರುವಾದವು. ಹೊಸ ಮೊಬೈಲು ಕೈಗೆ ಬಂದ ಸಂಭ್ರಮದಲ್ಲಿ ಕೆಲವು ತಿಂಗಳ ಕಾಲ ತರಗತಿಗಳನ್ನು ಆಸಕ್ತಿಯಿಂದ ನೋಡಿದಳು. ಮೊಬೈಲ್‌ನ ಜೊತೆಗೆ ಸಿಕ್ಕ ಪಟ್ಟಾಂಗದ ಅವಕಾಶಗಳನ್ನು ತಪ್ಪಿಸಿಕೊಳ್ಳಲಿಲ್ಲ. ಬರಬರುತ್ತ ತರಗತಿಗಳು ಬೋರ್ ಅನಿಸತೊಡಗಿದವು. ಪರೀಕ್ಷೆ ಇಲ್ಲ ಎಂಬುದು ಬಹುತೇಕ ನಿಶ್ಚಯ ಆಗುತ್ತಿದ್ದಂತೆಯೇ, ಆ ಪಾಠಗಳನ್ನು ನೋಡುವ ಕ್ರಮ, ಯುಟ್ಯೂಬ್ ಚಾನೆಲ್‌ನಲ್ಲಿ ಅಡುಗೆ ರೆಸಿಪಿ ನೋಡುವುದಕ್ಕಿಂತಲೂ ಲಘುವಾಗಿಬಿಟ್ಟಿತು.

ಈಗ ನೋಡಿದರೆ, ಅಪ್ಪನಿಗೆ ಆಫೀಸ್ ಕೆಲಸ ಶುರುವಾಗಿದೆ. ಅಮ್ಮನೂ 'ವರ್ಕ್ ಫ್ರಂ ಹೋಮ್' ಅಂತಿದ್ದವಳು ಈಗ ನೋಡಿದರೆ ಆಫೀಸಿಗೆ ಹೊರಟು ನಿಂತಿದ್ದಾಳೆ. ಮನೆಯಲ್ಲಿ ಪುಟ್ಟಕ್ಕನಿಗೆ ಸೂಚನೆಗಳ ಮೇಲೆ ಸೂಚನೆಗಳ ಸರಮಾಲೆ. 'ಎಲ್ಲ ಕ್ಲಾಸ್‌ಗಳನ್ನು ನೋಡು, ತಪ್ಪಿಸಬೇಡ, ಗೇಮ್ಸ್ ಆಡಬೇಡ, ನಾನುಬರುವವರೆಗೆ ಹೊಸ ಅಡುಗೆ ಟ್ರೈ ಮಾಡಬೇಡ...' ಹೀಗೆ. ಪುಟ್ಟಕ್ಕನಿಗೆ ಇಡೀ ದಿವಸ ಮನೆಯ ಚಿತ್ರಚಿತ್ರದ ಗೋಡೆಗಳನ್ನು ನೋಡಿ ನೋಡಿ ಕಣ್ಣು ಸೋತಿರುತ್ತದೆ. ಇನ್ನು ಈ ನಿಷೇಧಾಜ್ಞೆಗಳ ಸಾಮ್ರಾಜ್ಯವನ್ನು ಹೇಗಪ್ಪಾ ನಿಭಾಯಿಸುವುದು ಎಂದು ಅನಿಸುವುದೋ ಏನೋ. ಹಾಗಾಗಿ ಅಮ್ಮ ಹೇಳುವುದನ್ನು ಅವಳು ಕೇಳಿಸಿಕೊಳ್ಳುವುದನ್ನೇ ಬಿಟ್ಟುಬಿಟ್ಟಿದ್ದಾಳೆ. ಸುಮ್ಮನೇ 'ಹುಂಹುಂಹುಂ' ಎನ್ನುತ್ತ ತನ್ನ ಆಟೋಮ್ಯಾಟಿಕ್ ಕಾರಿನ ರಿಮೋಟ್ ಅದುಮುತ್ತಾ ಇರುತ್ತಾಳೆ.

ಸಲಹೆಗಳು, ಸೂಚನೆಗಳು, ಉಪದೇಶಗಳು, ತಿಳಿಹೇಳುವ ಪ್ರಕ್ರಿಯೆಗಳನ್ನು ಗಮನಿಸುವುದಾದರೆ, ಒಂದು ಪಾತ್ರೆಗೆ ನಲ್ಲಿಯಿಂದ ನೀರು ಬಿಡುವ ಒಂದು ಸರಳ ಘಟನೆಯನ್ನು ನೆನಪು ಮಾಡಿಕೊಳ್ಳಬಹುದು. ನಲ್ಲಿಯಿಂದ ವೇಗವಾಗಿ ನೀರು ಬಿಡುತ್ತಾ, ಅದರ ಕೆಳಗೆ ಪಾತ್ರೆ ಹಿಡಿಯಿರಿ. ನೀರಿನ ವೇಗಕ್ಕೆ ಪಾತ್ರೆ ಕೆಳಕ್ಕೆ ಹೋದಂತೆ ಭಾಸವಾಗುವುದು ಮತ್ತು ಪಾತ್ರೆ ತುಂಬಿದ ಕೂಡಲೇ ಪಕ್ಕನೇ ನಲ್ಲಿ ಬಂದ್ ಮಾಡಿದರೆ, ಪಾತ್ರೆಯಲ್ಲಿ ನೀರು ಭರ್ತಿ ಆಗಿರುವುದೇ ಇಲ್ಲ! ಪಾತ್ರೆ ತುಂಬಬೇಕಿದ್ದರೆ ನಲ್ಲಿಯ ನೀರು ನಿಧಾನವಾಗಿ ಹರಿದುಬರಬೇಕು. ತುಂಬುತ್ತಲೇ, ಇನ್ನಷ್ಟು ನಿಧಾನವಾಗಿ ಎಚ್ಚರಿಕೆಯಿಂದ ತುಸುತುಸುವೇ ನೀರನ್ನು ನಿಧಾನ ಮಾಡುತ್ತಾ ನಿಲ್ಲಿಸಬೇಕು.

ಪಾತ್ರೆ ಭರ್ತಿಯಾದ ಮೇಲೂ ನೀರು ಧುಮ್ಮಿಕ್ಕುತ್ತಲೇ ಇದ್ದರೆ ಅದು ಚೆಲ್ಲಿ ಹೋಗುವುದಷ್ಟೇ ಅಲ್ಲ, ತುಂಬಿರುವ ನೀರನ್ನೂ ಪಾತ್ರೆಯಲ್ಲಿ ಉಳಿಯಲು ಬಿಡುವುದಿಲ್ಲ. ಧಾರೆಯ ರಭಸಕ್ಕೆ ಪಾತ್ರೆಯ ನೀರು ಚಿಮ್ಮಿ ಚಿಮ್ಮಿ ಹೊರಹರಿದುಬಿಡುತ್ತದೆ. ಮನಸ್ಸು ಹೀಗೆಯೇ ಅಲ್ಲವೇ?

ಮಕ್ಕಳಿಗೆ ಮಾಡುವ ಬೋಧನೆಗಳು, ಕೊಡುವ ಸಲಹೆಗಳೂ ಹೀಗೆಯೇ ಇರುತ್ತವೆ. ಅಪ್ಪನೋ, ಅಮ್ಮನೋ ತಾವು ಬರುವುದು ಸಂಜೆಯಾಗುತ್ತದೆ ಎಂಬ ಬೇಸರದಲ್ಲೋ ಅಥವಾ ಮಗು ತಾನೊಂದೇ ಅಥವಾ ಮಕ್ಕಳಿಬ್ಬರೇ ಮನೆಯಲ್ಲಿ ಏನು ಮಾಡಿಕೊಳ್ಳುತ್ತಾರೋ ಎಂಬ ಆತಂಕದಲ್ಲಿಯೋ, ಹೇಳಬೇಕಾದ್ದನ್ನೆಲ್ಲಾ ಬೆಳಿಗ್ಗೆಯೇ ಆಟೋರೆಕಾರ್ಡ್ ರೀತಿಯಲ್ಲಿ ಹೇಳಿ ತಮ್ಮ ಮನಸ್ಸು ಹಗುರ ಮಾಡಿಕೊಳ್ಳಬಹುದಷ್ಟೇ. ಅಂಥ ಸಲಹೆಗಳು, ಸೂಚನೆಗಳು, ಉಪದೇಶಗಳು ಕೊಡುವವರ ದೃಷ್ಟಿಕೋನದಿಂದ ರಚನೆಯಾಗಿರಬಾರದು. ಸ್ವೀಕರಿಸುವ ಮನಸ್ಸಿನ ಸ್ಥಿತಿಗೆ ತಕ್ಕಂತೆ ಅದು ರೂಪುಗೊಳ್ಳಬೇಕು. ಮಗುವಿನ ಮನಸ್ಥಿತಿ ಅರ್ಥ ಮಾಡಿಕೊಂಡು, ಸ್ವೀಕಾರದ ಮನಸ್ಥಿತಿ ರೂಪುಗೊಂಡ ಮೇಲೆ ಸಲಹೆ ನೀಡಬಹುದಷ್ಟೆ.

ಪುಟ್ಟಕ್ಕ ಮೊನ್ನೆ ಅಮ್ಮನಿಗೆ ಹೀಗೆ ಹೇಳಿದಳು: 'ಕೆಳಗಿನ ಫ್ಲ್ಯಾಟ್‌ನಲ್ಲಿರುವ ಹತ್ತನೇ ತರಗತಿಯ ಸುಕನ್ಯಾ ಅಕ್ಕನಿಗೆ ದಿನಾ ಟ್ಯೂಷನ್ನು ಇದೆಯಂತೆ. ಅದೇ ಟ್ಯೂಷನ್ ಮಿಸ್ ಹತ್ರ ನಾನೂ ಹೋಗಲಾ ಅಮ್ಮಾ?'

ಏಳನೇ ತರಗತಿಯ ಕೊನೆಯ ಭಾಗದಲ್ಲಿ, 'ಪುಟ್ಟಕ್ಕಾ, ಟ್ಯೂಷನ್‌ಗೆ ಒಂದರ್ಧ ಗಂಟೆ ಹೋಗಿ ಬಾ' ಎಂದರೆ, ರಂಪ ಮಾಡುತ್ತಿದ್ದ ಪುಟ್ಟಕ್ಕ ಹೀಗೇಕೆ ಹೇಳುತ್ತಿದ್ದಾಳೆ ಎಂದು ಅಮ್ಮನಿಗೆ ಒಂದರೆ ಗಳಿಗೆ ಅರ್ಥವಾಗಲಿಲ್ಲ. ಆದರೆ ತಾನಿಲ್ಲದೇ ಇರುವಾಗ, ಮಗಳು ಸ್ನೇಹವಲಯದಲ್ಲಿ ನಕ್ಕು ನಲಿಯಲಿ ಎಂಬ ಸದುದ್ದೇಶವೊಂದು ಅಮ್ಮನ ಮನದಲ್ಲಿ ಹಾದುಹೋಯಿತು. ಸುಕನ್ಯಾಳ ಅಮ್ಮನಿಗೆ ಫೋನ್ ಮಾಡಿ ಟ್ಯೂಷನ್ ವ್ಯವಸ್ಥೆಗೆ ತಯಾರಿ ಮಾಡಿದಳು.

ತುಸು ಆಟ, ತುಸು ಚೇಷ್ಟೆ, ಸ್ವಲ್ಪ ಪ್ರಯಾಣ, ಎಲ್ಲರೊಂದಿಗೆ ಊಟ, ಗೇಮ್ಸ್ ಕ್ಲಾಸು, ಟೀಚರ್ ಮೆಚ್ಚುಗೆ, ಬೈಗಳು, ಪನಿಶ್‌ಮೆಂಟು, ಸಹಪಾಠಿಯೊಂದಿಗೆ ಠೂ... ಸೇ... ಜೂಟಾಟ – ಇದೆಲ್ಲದರ ನಡುವೆ ಒಂದಿಷ್ಟು ಪಾಠ ಮಗುವಿನ ಮನದೊಳಗೆ ಅಂತರ್ಜಲದಂತೆ ಇಳಿಯುವುದು. ಬೆಳಿಗ್ಗೆಯೇ ಆನ್‌ಲೈನ್‌ನಲ್ಲಿ ಟೀಚರ್ ಹೇಳುವ ಪಾಠ ಎಂದರೆ, ಯಾರೋ ನಿಲ್ಲಿಸಲು ಮರೆತ ನಲ್ಲಿಯಂತೆ ತೋರುವುದು. ಅದಕ್ಕೇ ಪುಟ್ಟಕ್ಕನಿಗೆ, 'ಶಾಲೆ ಇಲ್ಲದಿದ್ದರೆ ಬೇಡ, ಟ್ಯೂಷನ್‌ನಲ್ಲಾದರೂ ಸಮಾನಮನಸ್ಕರ ಜೊತೆಗೆ ಸಮಯ ಕಳೆಯೋಣ' ಅನಿಸಿರಬಹುದು.

ಪ್ರತಿಕ್ರಿಯಿಸಿ: feedback@sudha.co.in